**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3842/2021**

| | | |
|---|---|---|
| ಹೆಸರು | ಃ | ಶ್ರೀಮತಿ.ವಿದ್ಯಾ ರಾಥೋಡ್ |
| ಗಂಡನ ಹೆಸರು | ಃ | ಪ್ರದೀಪ್ |
| ವಯಸ್ಸು | ಃ | 31 |
| ಉದ್ಯೋಗ | ಃ | ಮಹಿಳಾ ಪೋಲಿಸ್ ಉಪ ನಿರೀಕ್ಷಕರು |
| ಹಾಲಿ ವಾಸ | ಃ | ಹೆಚ್ ಎ ಎಲ್ |

CW-8, PW-5

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 22.11.2024**

**ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿಯವರಿಂದಃ**

ನಾನು ದಿಃ08.03.2019 ರಿಂದ ಏಪ್ರಿಲ್ 2021 ರವರೆಗೆ ಬಾಗಲೂರು ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 10.03.2021 ರಂದು ರಾತ್ರಿ 09.00 ಗಂಟೆಗೆ ನಾನು ಠಾಣ ಪ್ರಬಾರದಲ್ಲಿದ್ದಾಗ ಚಾಸಾ-1 ನೀಡಿದ ದೂರನ್ನು ಪಡೆದುಕೊಂಡು ನಮ್ಮ ಠಾಣ ಮೊಕ್ಕದ್ದಮೆ ಸಂಖ್ಯೆ.47/2021 ರಂತೆ ಪ್ರ.ವ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ-1 ಎಂದು ಗುರುತಿಸಾಲಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಪ್ರ.ವ ವರದಿಯನ್ನು ನಿಪಿ-3 ಎಂದು, ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಿಃ11.03.2021 ರಂದು ತನಿಖೆಯನ್ನು ಮುಂದುವರಿಸಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಯಿಸಿಕೊಂಡು ಚಾಸಾ-1 ರವರು ತೋರಿಸಿದ ಸ್ಥಳವನ್ನು ನಿಪಿ-2 ರಂತೆ ಮಹಜರ್ ಮಾಡಿರುತ್ತೇನೆ. ಮಹಜರ್ ಸಮಯದಲ್ಲಿ ಕೃತ್ಯಕ್ಕೆ ಉಪಯೋಗಿಸಿದ್ದ ನೀಲಗಿರಿ ದೊಣ್ಣೆಯನ್ನು ಸ್ವಾದೀನ ಪಡಿಸಿಕೊಂಡಿರುತ್ತೇನೆ. ನಾನು ಸ್ಥಳದಲ್ಲಿ ತಯಾರಿಸಿದ್ದ ಮಹಜರ್ ಈಗಾಗಲೇ ನಿಪಿ-2 ಎಂದು ಗುರುತಿಸಾಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಸ್ವಾದೀನ ಪಡಿಸಿದ ನೀಲಗಿರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಲಯದ ಮುಂದಿರುವ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಠಾಣೆಗೆ

ವಾಪಸ್ಸು ಆಗಿ ಸ್ವಾದೀನ ಪಡಿಸಿದ ವಸ್ತುವನ್ನು ಸ್ವತ್ತುಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ಅದೇ ದಿನ ಚಾಸಾ-2 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ:12.03.2021 ರಂದು ಚಾಸಾ-1 ರವರು ಚಿಕಿತ್ಸೆ ಪಡೆದುಕೊಂಡ ಯಲಹಂಕ ಆಸ್ಪತ್ರೆಗೆ ಗಾಯದ ಪ್ರಮಾಣ ಪತ್ರವನ್ನು ಪಡೆಯಲು ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿಗಳು ಠಾಣೆಗೆ ಹಾಜರಾಗಿದ್ದು, ಅವರನ್ನು ವಿಚಾರಣೆ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ದಿ:25.03.2021 ರಂದು ಚಾಸಾ-1 ರವರ ಗಾಯದ ಪ್ರಮಾಣವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಾನು ಸಲ್ಲಿಸಿದ್ದ ಮನವಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಗಾಯದ ಪ್ರಮಾಣ ಪತ್ರವನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ತನಿಖೆಯು ಮುಕ್ತಾಯವಾಗಿದ್ದು ಸಾಕಷ್ಟು ಸಾಕ್ಷದಾರಗಳಿದ್ದ ಕಾರಣ ಆರೋಪಿಗಳ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲು : ಶ್ರೀಮತಿ. ಟಿ ಕೆ ಎಸ್ ಆರೋಪಿ ಪರ ವಕೀಲರಿಂದ:</u>**

ಚಾಸಾ-1 ರವರು ದೂರು ನೀಡಲು ತಡವಾದ ಬಗ್ಗೆ ವಿವರಣೆ ನೀಡಿರುತ್ತಾರೆ. ಈ ವಿಚಾರವನ್ನು ನನ್ನ ಅಂತಿಮ ವರದಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ಚಾಸಾ-4 ಮತ್ತು 5 ರವರ ಹೇಳಿಕೆಗಳಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ನಾನು, ನನ್ನ ಸಿಬ್ಬಂದಿ ಹಾಗೂ ಚಾಸಾ-2 ಮತ್ತು 6 ರವರ ಹೋಗಿದ್ದೆವು. ಸರ್ವೆ ನಂ.91/8 ರ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಆದರೆ ಕೃತ್ಯ ನಡೆದ ಸ್ಥಳದ ಪರಿಶೀಲನೆ ಮಾಡಿರುತ್ತೇನೆ. ಗಲಾಟೆಯಾದ ಬಗ್ಗೆ ಯಾವುದೇ ಕುರುಹುಗಳು ಇರಲಿಲ್ಲ, ಆದರೆ ಪ್ರತ್ಯಕ್ಷ ದರ್ಶಿಗಳು ಇದ್ದರು. ಸರ್ವೆ ನಂ.91/8 ಆಸ್ತಿಗೆ ಸಂಬಂದಿಸಿದಂತೆ ಪ್ರಕರಣಗಳು ಇದ್ದ ಬಗ್ಗೆ ನಾನು ವಿಚಾರಣೆ ಮಾಡಿರಲಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ನಿಪಿ-2 ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರಿಂದ 4 ರವರು ಚಾಸಾ-1 ರವರ ಸಂಬಂದಿಕರು ಎಂದರೆ ಸರಿ. ಚಾಸಾ-1 ರವರಿಗೆ ಯಾವುದೇ ಹಲ್ಲೆ ಆಗಿರುವುದಿಲ್ಲ ಮತ್ತು ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆಯಾಗದಿದ್ದರೂ ಸಹ ಆರೋಪಿಗಳಿಗೆ ತೊಂದರೆ ಕೊಡುವ

ಉದ್ದೇಶದಿಂದ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಜೊತೆ ಶಾಮೀಲಾಗಿ ನಿಪಿ-4 ಮತ್ತು 5 ನ್ನು ಈ ಕೇಸಿಗಾಗಿ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3842/2021**

ಹೆಸರು : ರಾಮಾಂಜಿನಪ್ಪ

ತಂದೆಯ ಹೆಸರು : ಮುನಿರೆಡ್ಡಿ

ವಯಸ್ಸು : 35

ಉದ್ಯೋಗ : ವ್ಯವಸಾಯ

ವಾಸ : ಸಿಂಗಹಳ್ಳಿ ಗ್ರಾಮ.

CW-4, PW-4

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 25.07.2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದಃ**

1. ಆರೋಪಿತರನ್ನು ನೋಡಿರುತ್ತೇನೆ. ಚಾಸಾ-1 ನನ್ನ ತಂದೆ, ಚಾಸಾ-2, 3 ಮತ್ತು 5 ರವರ ಪರಿಚಯ ಇರುತ್ತದೆ. ದಿ:09.03.2021 ರಂದು ಬೆಳಿಗ್ಗೆ 8.00 ರಿಂದ 08.30 ಗಂಟೆಗೆ ಸುಮಾರಿಗೆ ನಮ್ಮ ಗ್ರಾಮದಲ್ಲಿರುವ ನೀಲಗಿರಿ ತೋಪನ್ನು ಕಡಿಯುತ್ತಿದ್ದಾರೆ ಎಂದು ಬೇರೆಯವರು ಹೇಳಿದ್ದು ಅದನ್ನು ನೋಡಲು ಚಾಸಾ-1 ರವರು ಹೋಗಿದ್ದರು. ನಂತರ ಅರ್ಧ ಗಂಟೆ ಕಳೆದರು ಸಹ ನಮಗೆ ಯಾವುದೇ ವಿಚಾರ ಗೊತ್ತಾಗಲಿಲ್ಲ. ಆ ಕಾರಣದಿಂದ ನಾನು ಕಾರಿನಲ್ಲಿ ನೀಲಗಿರಿ ತೋಪಿನ ಬಳಿ ಹೋದೆ. ಆ ಸಂದರ್ಬದಲ್ಲಿ ನನ್ನ ತಂದೆ ಸುಸ್ತಾಗಿ ಕೆಳಗೆ ಬಿದ್ದಿದ್ದರು. ನಂತರ ನಾನು ಅವರನ್ನು ಹೋಗಿ ಎತ್ತಿ ಕೂರಿಸಿ ವಿಚಾರಿಸಿದಾಗ, ಚಾಸಾ-1 ರವರಿಗೆ ಆರೋಪಿಗಳು ಹಲ್ಲೆ ಮಾಡಿರುವುದಾಗಿ ತಿಳಿಸಿದರು. ಆ ಪೈಕಿ 2 ನೇ ಆರೋಪಿ ಬೆನ್ನಿಗೆ ಹೊಡೆದ್ದಿರು ಎಂದು ಹೇಳಿದರು. ನಂತರ ಆರೋಪಿಗಳು ನನಗೆ ಸೂಳೆ ಮಗನೇ, ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಮತ್ತೆ ನೀನು ಇಲ್ಲಿಗೆ ಬಂದರೆ ನಿನಗೆ ಗತಿ ಕಾಣಿಸುತ್ತೇನೆ ಎಂದು ಹೇಳಿದ್ದರು ಎಂದು ನನ್ನ ತಂದೆ ನನಗೆ ಹೇಳಿದರು. ನಂತರ ಚಾಸಾ-3 ರವರ ಸಹಾಯದೊಂದಿಗೆ ನನ್ನ ತಂದೆಯನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಸಂದರ್ಬದಲ್ಲಿ ವೈದ್ಯರಿಗೆ ಗಲಾಟೆಯ ಬಗ್ಗೆ ವಿಷಯ ತಿಳಿಸಿದಾಗ ಅವರು ಒಂದು ಮಾತ್ರೆ ನೀಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ನಂತರ ಚಾಸಾ-5 ರವರು ನನ್ನ ತಂದೆಯನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ತಂದೆಗೆ ಹಲ್ಲೆ ಮಾಡಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಗಳಾಗಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎನ್ ಕೆ ಜಿ ಆರೋಪಿ ಪರ ವಕೀಲರಿಂದಃ**

ಸಾಕಮ್ಮ ಎಂಬುವವರು ನನಗೆ ಮುತ್ತಜ್ಜಿ ಆಗಬೇಕು. ರಾಧಮ್ಮ, ಕೆಂಪಮ್ಮ ಎಂಬುವವರು ನಮ್ಮ ಸಂಬಂದಿಕರು. ದಿಃ19.02.2019 ರಂದು ಸರ್ವೆ ನಂ.91/8 ನೀಲಗಿರಿ ತೋಪು ಜಾಗವನ್ನು ಆರೋಪಿಗಳಿಗೆ ಕೆಂಪಮ್ಮ ಹಕ್ಕು ನಿವೃತ್ತಿ ಪತ್ರದ ಪ್ರಕಾರ ಬಿಟ್ಟುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಆರೋಪಿಗಳ ವಿರುದ್ದ ಒಂದು ಸಿವಿಲ್ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯ ವಿದ್ಯಾಮಾನಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸದರಿ ದಾವೆಯು ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಮೇಲ್ಕಂಡ ಸಿವಿಲ್ ದಾವೆ ಚಾಲ್ತಿಯಲ್ಲಿರುವ ಬಗ್ಗೆ ತಿಳಿಸಿರುವುದಿಲ್ಲ. ನಾನು ನೀಡಿರುವ ಹೇಳಿಕೆ ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಹೇಳಿದ ಮೇರೆಗೆ ಗೊತ್ತಾಗಿದೆ ಎಂದರೆ ಸರಿ. ಆರೋಪಿಗಳಿಗೆ ಮೇಲ್ಕಂಡ ಜಮೀನು ಅವರ ಪರವಾಗಿ ಆಗಿದೆ ಎಂಬ ಉದ್ದೇಶದಿಂದ ಅವರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನೆಡೆದಿರುವುದಿಲ್ಲ, ನನ್ನ ತಂದೆ ಸುಸ್ತಾಗಿ ಬಿದ್ದಿಕರುವುದಿಲ್ಲ ಎಂದರೆ ಸರಿಯಲ್ಲ. ಸಿಂಗಳ್ಳಿ ಗ್ರಾಮದಿಂದ ಬೂದಿಗೆರೆಗೆ 4 ಕಿ ಮಿ ಅಂತರ ಇರುತ್ತದೆ. ಸಿಂಗಳ್ಳಿ ಯಿಂದ ಯಲಹಂಕ 14 ಕಿ ಮಿ ಅಂತರ ಇರುತ್ತದೆ. ಆ ರೀತಿ ಚಾಸಾ-1 ರವರನ್ನು ಬೂದಿಗೆರೆಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಪೋಲಿಸರ ಜೊತೆ ಶಾಮೀಲಾಗಿ ವೈದ್ಯಕೀಯ ಪ್ರಮಾಣ ಪತ್ರವನ್ನು ಸೃಷ್ಟಿಮಾಡಿ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಆರೋಪಿಗಳು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**
**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಕರ್ನಾಟಕ ಸರ್ಕಾರ**

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3842/2021**

ಹೆಸರು : ವೆಂಕಟೇಶ್

ತಂದೆಯ ಹೆಸರು : ನಂದೀಶಪ್ಪ

ವಯಸ್ಸು : 45

ಉದ್ಯೋಗ : ವ್ಯವಸಾಯ

ವಾಸ : ಸಿಂಗಹಳ್ಳಿ ಗ್ರಾಮ.

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 14.06.2024**

**ಮುಖ್ಯ ವಿಚಾರಣೆ : ಎಪಿಪಿಯುವರಿಂದಃ**

1. ಚಾಸಾ 1 ಮತ್ತು ಆರೋಪಿತರ ಪರಿಚಯವಿರುತ್ತದೆ. ದಿಃ09.03.2021 ರಂದು ಬೆಳಿಗ್ಗೆ 8.00 ರಿಂದ 08.30 ಗಂಟೆಗೆ ನಾನು ನಮ್ಮ ತೋಟದಲ್ಲಿ ಇರುವಾಗ ಆರೋಪಿತರು ತಮ್ಮ ತೋಪಿನಲ್ಲಿ ಕೆಲಸ ಮಾಡಿಸುತ್ತಿದ್ದರು. ಆಗ ಚಾಸಾ 1 ರವರು ಬಂದು ಈಗ ವ್ಯಾಜ್ಯವು ನ್ಯಾಯಾಲಯದಲ್ಲಿರುವುದರಿಂದ ಈ ರೀತಿ ಮಾಡಬಾರದು ಎಂದು ಹೇಳಿದ್ದು ಆಗ ಗಲಾಟೆ ಪ್ರಾರಂಭವಾಗಿರುತ್ತದೆ. ಆಗ ಆರೋಪಿಗಳು ಬೈಯ್ಯಲು ಪ್ರಾರಂಭಿಸಿ ಆಗ 2 ಮತ್ತು 3 ನೇ ಆರೋಪಿ ಚಾಸಾ 1 ರವರ ಕುತ್ತಿಗೆ ಪಟ್ಟಿಯನ್ನು ಹಿಡಿದುಕೊಂಡಿದ್ದು 1 ನೇ ಆರೋಪಿಯು ದೊಣ್ಣೆಯನ್ನು ತೆಗೆದುಕೊಂಡು ಚಾಸಾ 1 ರವರ ಬೆನ್ನಿಗೆ ಹೊಡೆದಾಗ ಮೂರ್ಛೆ ಹೋಗಿರುತ್ತಾರೆ. ನಂತರ ನಾನು ಚಾಸಾ 3 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದು ಅವರು ಬಂದು ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ 11-03-2021 ರಂದು ಪೋಲೀಸರು ಮಹಜರ್ ಗೆ ಬಂದಿದ್ದು ಮಹಜರ್ ಮಾಡಿ ಸ್ಥಳದಲ್ಲಿ ಇದ್ದ ದೊಣ್ಣೆಯನ್ನು ಸ್ವಾಧೀನ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ಸದರಿ ಮಹಜರ್ ನ್ನು ಬೆಳಗ್ಗೆ 10.00 ಗಂಟೆಯಿಂದ 10.30 ರ ವರೆಗೆ ಮಾಡಿರುತ್ತಾರೆ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸಾಕ್ಷಿಯ ಸಹಿಯನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯಲ್ಲಿ ನನ್ನ ಜೊತೆ ಚಾಸಾ 6 ರವರು ಸಹ ಇದ್ದರು.

**ಪಾಟೀ ಸವಾಲುಃ ಶ್ರೀ ಎನ್ ಕೆ ಜಿ ಆರೋಪಿ ಪರ ವಕೀಲರಿಂದಃ**

ಆರೋಪಿಗಳು ಮತ್ತು ಚಾಸಾ 1 ರವರು ಅಣ್ಣ ತಮ್ಮಂದಿರು ಎಂದರೆ ಸರಿ. ಮೊದಲಿನಿಂದಲೂ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ನಾನು ಮತ್ತು ಚಾಸಾ 1 ರವರು ಚೆನ್ನಾಗಿದ್ದೇವೆ ಎಂದರೆ ಸರಿಯಲ್ಲ. ಗಲಾಟೆ ನಡೆಯುವ ಸಂದರ್ಭದಲ್ಲಿ ನಾನು ಪಕ್ಕದಲ್ಲಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೋಡಿದಾಗ ಆರೋಪಿಗಳು ಮರಗಳನ್ನು ಕಟಾವು ಮಾಡುತ್ತಿದ್ದರು. ಈ ಬಗ್ಗೆ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಆರೋಪಿಗಳು ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ

ಮತ್ತು ನನ್ನ ನಡುವೆ ಮೊದಲಿನಿಂದಲೂ ಆಗುತ್ತಿರುವುದಿಲ್ಲ. ನಾನು ಚಾಸಾ 1 ರವರ ಜೊತೆ ಚೆನ್ನಾಗಿರುವುದರಿಂದ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿಗಳ ನಡುವೆ ಇದ್ದ ಸಿವಿಲ್ ವ್ಯಾಜ್ಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆರೋಪಿಗಳನ್ನು ನಾನು ಕೆಲಸ ಮಾಡುತ್ತಿದ್ದ ಬಗ್ಗೆ ಕೇಳಿರುವುದಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ನಾನು ಮನೆಯ ಒಳಗೆ ಇದ್ದೆ ಎಂದು ಹೇಳಿದ್ದೇನೆ ಎಂದರೆ ಸರಿ. ಆ ಕಾರಣದಿಂದ ನಾನು ಯಾವುದೇ ಗಲಾಟೆ ನೋಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2 ಮತ್ತು 3 ರವರು ಚಾಸಾ 1 ರವರ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಹಾಗೂ ಆ ಸಮಯದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ 1 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದು ಹಲ್ಲೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಯಾವುದೇ ಬೆದರಿಕೆ ಹಾಕಿರುವುಕಿದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ಮತ್ತು ಆರೋಪಿಗಳ ತೋಪಿನ ನಡುವೆ ಅರ್ಧ ಕಿ.ಮೀ. ದೂರ ಇರುತ್ತದೆ. ಚಾಸಾ 3 ರವರಿಗೆ ಸ್ಥಳದಲ್ಲಿದ್ದವರು ದೂರವಾಣಿ ಕರೆ ಮಾಡಿರುತ್ತಾರೆ. ಆ ರೀತಿ ಗಲಾಟೆ ನಡೆಯದೇ ಇದ್ದರೂ ಸಹ ಸಿವಿಲ್ ವ್ಯಾಜ್ಯಕ್ಕೆ ಅನುಕೂಲವಾಗಲು ಚಾಸಾ 1 ರವರು ಸುಳ್ಳು ಪ್ರಕರಣ ದಾಖಲು ಮಾಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನನಗೆ ಮಹಜರ್ ಗೆ ಬರುವಂತೆ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿ. ಮು.ಮಾ.1 ರ ಮೇಲೆ ನನ್ನ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಮು. ಮಾ. 1 ಎಲ್ಲ ಕಡೆ ಸಿಗುತ್ತದೆ ಮತ್ತು ರೈತರ ಮನೆಯಲ್ಲಿ ಸೌದೆ ಹಾಗೂ ಇತರ ಕಾರ್ಯಕ್ಕೆ ಬಳಸುತ್ತಾರೆ ಎಂದರೆ ಸರಿ. ಮಹಜರ್ ಸಮಯದಲ್ಲಿ ಯಾವುದೇ ದೊಣ್ಣೆಯನ್ನು ಸ್ವಾಧೀನಪಡಿಸಿರುವುದಿಲ್ಲ ಎಂದಂರೆ ಸರಿಯಲ್ಲ. ನಿಪಿ 2 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಠಾಣೆಯಲ್ಲಿ ಕುಳಿತು ನಿಪಿ 2 ನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ರ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನಿಪಿ 2 ಕ್ಕೆ ನಾನು ಓದಿದ ನಂತರ ಸಹಿ ಮಾಡಿರುತ್ತೇನೆ. ನಾನು ಸ್ಥಳದಲ್ಲಿ ಇಲ್ಲದೇ ಇದ್ದ ಕಾರಣ ಚೆಕ್ಕುಬಂದಿ ಹೇಳಲು

ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆ ಚಾಸಾ 6 ರವರು ಸ್ಥಳದಲ್ಲೇ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿಗಳು ಬೇರೆ ಪಕ್ಷದವರಾಗಿದ್ದು ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3842/2021**

ಹೆಸರು : ಪ್ರಕಾಶ್

ತಂದೆಯ ಹೆಸರು : ವೆಂಕಟೇಶಪ್ಪ

ವಯಸ್ಸು : 37

ಉದ್ಯೋಗ : ವ್ಯವಸಾಯ

ವಾಸ : ಸಿಂಗಹಳ್ಳಿ ಗ್ರಾಮ.

CW-3, PW-2

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 21.03.2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದಃ**

1. ದಿಃ09.03.2021 ರಂದು ಬೆಳಿಗ್ಗೆ 08.30 ಗಂಟೆಗೆ ನಾನು ತೋಟದಲ್ಲಿ ಕೆಲಸ ಮಾಡುವಾಗ ನಮ್ಮ ತೋಟದಲ್ಲಿ ಪಕ್ಕದಲ್ಲಿ ನೀಲಗಿರಿ ತೋಪು ಇದ್ದು, ಸದರಿ ತೋಪಿನಲ್ಲಿ ಆರೋಪಿಗಳು ನೀಲಗಿರಿ ಮರಗಳನ್ನು ಕಡಿಸುತ್ತಿದ್ದರು. ಆ ಸಮಯಕ್ಕೆ ಚಾಸಾ-1 ಮತ್ತು ಅವರ ಹೆಂಡತಿ ಬಂದು ಆರೋಪಿಗಳನ್ನು ಈ ಆಸ್ತಿಯ ಮೇಲೆ ಕೇಸು ಇದೆ ಯಾಕೆ ಯಾಕೆ ಮರಗಳನ್ನು ಕಡಿಸುತ್ತಿದ್ದೀರಿ ಎಂದು ಕೇಳಿದಾಗ, ಇದನ್ನು ಕೇಳಲು ನೀನು ಯಾರು ಎಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಆರೋಪಿ 2 ಮತ್ತು 3 ರವರು ಚಾಸಾ-1 ರವರ ಕುತ್ತಿಗೆ ಪಟ್ಟಿಯನುನ ಹಿಡಿದುಕೊಂಡು ಹಲ್ಲೆ ಮಾಡಿದರು. ಆ ಸಮಯಕ್ಕೆ 1 ನೇ ಆರೋಪಿ ನೀಲಗಿರಿ ಮರದ ದೊಣ್ಣೆಯಿಂದ ಚಾಸಾ-1 ರವರ ಬೆನ್ನಿಗೆ ಹೊಡೆದರು, ಆಗ ಚಾಸಾ-1 ರವರು ಕುಸಿದು ಬಿದ್ದರು. ತಕ್ಷಣ ನಾವೆಲ್ಲರೂ ಅವರಿಗೆ ನೀರು ಕುಡಿಸಿದೆವು. ಆಗ ಚಾಸಾ-4 ರವರು ಕಾರು ತೆಗೆದುಕೊಂಡು ಬಂದಿದ್ದು ಚಾಸಾ-1 ರವರನ್ನು ಕರೆದುಕೊಂಡು ಹೋದರು. ಆರೋಪಿ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-1 ರವರಿಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು

3 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎನ್ ಕೆ ಜಿ ಆರೋಪಿ ಪರ ವಕೀಲರಿಂದಃ**

1. ನಾನು ಮತ್ತು ಚಾಸಾ-1 ರವರು ಒಟ್ಟಿಗೆ ಸಾಕ್ಷಿ ನುಡಿಯಲು ಬಂದಿದ್ದೇವೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಆರೋಪಿಗಳ ನಡುವೆ ಸಿವಿಲ್ ದಾವೆ ಇದ್ದು, ಸದರಿ ದಾವೆ ಯಾವ ರೀತಿ ತೀರ್ಮಾನ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಮ್ಮ ತೋಟದಿಂದ ಘಟನಾ ಸ್ಥಳಕ್ಕೆ ಸುಮಾರು 500 ಮೀಟರ್ ಅಂತರ ಇದೆ ಎಂದರೆ ಸರಿಯಲ್ಲ. ನಾವು ಮತ್ತು ಚಾಸಾ-1 ರವರು ಆತ್ಮೀಯವಾಗಿದ್ದೇವೆ ಎಂದರೆ ಸಾಕ್ಷಿ ಆರೋಪಿಗಳ ಜೊತೆಯಲ್ಲಿ ಸಹ ಆತ್ಮೀಯವಾಗಿದ್ದೆ ಎಂದು ನುಡಿಯುತ್ತಾರೆ. ಘಟನಾ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ಆಗದೇ ಇದ್ದರೂ ಚಾಸಾ-1 ರವರಿಗೆ ಸಹಾಯ ಆಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ-1 ರವರಿಗೆ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**
**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3842/2021**

ಹೆಸರು : ಮುನಿರೆಡ್ಡಿ

ತಂದೆಯ ಹೆಸರು : ರಾಮಪ್ಪ

ವಯಸ್ಸು : 63

ಉದ್ಯೋಗ : ವ್ಯವಸಾಯ

ವಾಸ : ಸಿಂಗಹಳ್ಳಿ ಗ್ರಾಮ.

CW-1, PW-1

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 21.03.2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದಃ**

1. ಚಾಸಾ-4 ನನ್ನ ಮಗ, ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ದಿಃ09.03.2021 ರಂದು ಬೆಳಿಗ್ಗೆ 08.30 ಗಂಟೆಗೆ ನಾನು ನಮ್ಮ ಜಮೀನಿನ ಬಳಿ ಹೋಗಿದ್ದು, ನಮ್ಮ ಜಮೀನಿಗೆ ಸಂಬಂದಿಸಿದಂತೆ ವಿಭಾಗಕ್ಕಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಗಳು ಚಾಲ್ತಿಯಲ್ಲಿರುತ್ತದೆ. ಆ ರೀತಿ ಸರ್ವೆ ನಂ.91/8 ರಲ್ಲಿ ನೀಲಗಿರಿ ತೋಪು ಇದ್ದು ಅದರಲ್ಲಿ ಇದ್ದ ಮರಗಳನ್ನು ಆರೋಪಿಗಳು ಮಾರಾಟ ಮಾಡಿ ಕಡಿಸುತ್ತಿದ್ದರು. ತಕ್ಷಣ ನಾನು ಮತ್ತು ನನ್ನ ಹೆಂಡತಿ ಸ್ಥಳಕ್ಕೆ ಹೋಗಿದ್ದು ಆಗ 3 ಜನ ಆರೋಪಿಗಳು ನೀಲಗಿರಿ ತೋಪಿನ ಬಳಿ ಇದ್ದು, ನಾನು ಸದರಿ 3 ಜನ ಆರೋಪಿಗಳನ್ನು ಯಾಕೆ ನೀಲಗಿರಿ ಮರಗಳನ್ನು ಕಡಿಸುತ್ತಿದ್ದೀರಿ ಈಗಾಗಲೇ ಸಿವಿಲ್ ದಾವೆ ವಿಭಾಗಕ್ಕಾಗಿ ಚಾಲ್ತಿಯಲ್ಲಿದೆ ಎಂದು ಕೇಳಿದಾಗ 2 ನೇ ಆರೋಪಿ

ನನ್ನ ಕೈ ಹಿಡಿದು ಕೊಂಡಿದ್ದು, 3 ನೇ ಆರೋಪಿ ನನ್ನ ಕುತ್ತಿಗೆ ಪಟ್ಟಿ ಹಿಡಿದುಕೊಂಡನು. ಆಗ 1 ನೇ ಆರೋಪಿ ನೀಲಗಿರಿ ದೊಣ್ಣೆಯನ್ನು ತೆಗೆದುಕೊಂಡು ನನ್ನ ಬೆನ್ನಿಗೆ ಹೊಡೆದನು. ಆಗ ನಾನು ಜ್ಞಾನತಪ್ಪಿ ಕೆಳಗೆ ಬಿದ್ದಿದ್ದು, ನನ್ನ ಹೆಂಡತಿ ಬಾಯಿಬಡಿದು ಕೊಂಡು ಯಾರಿಗೋ ದೂರವಾಣಿ ಕರೆ ಮಾಡಿದ್ದರು, ಆಗ ಚಾಸಾ-3 ಮತ್ತು 4 ರವರು ನನ್ನನ್ನು ಮನಗೆ ಕರೆದುಕೊಂಡು ಬಂದು ನಂತರ ನನಗೆ ಉಸಿರು ಆಟದ ತೊಂದರೆ ಆದ ಕಾರಣ ಅವರು ನನಗೆ ಖಾಸಗಿ ಆಸ್ಪತ್ರೆಗೆ ಹೋಗಿ ಅಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಯಲಹಂಕ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ. ಮರು ದಿನ ನಾನು ಆಸ್ಪತ್ರೆಯಿಂದ ಬಂದು ದಿ:10.03.2021 ರಂದು ಬಾಗಲೂರು ಪೋಲಿಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-1 ಎಂದು, ಸಾಕ್ಷಿಯ ಹೆಬ್ಬೆಟ್ಟಿನ ಗುರುತಿನ್ನು 1(ಎ) ಎಂದು ಗುರುತಿಸಲಾಯಿತು. ದಿ:11.03.2021 ರಂದು ಚಾಸಾ-8 ಮತ್ತು ಇಬ್ಬರು ಪೋಲಿಸ್ ಸಿಬ್ಬಂದಿಗಳು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದರು. ಆ ಸಮಯದಲ್ಲಿ ಹಲ್ಲೆಗೆ ಉಪಯೋಗಿಸಿದ್ದ ದೊಣ್ಣೆಯನ್ನು ಸ್ವಾದೀನ ಪಡಿಸಿಕೊಂಡಿರುತ್ತಾ‌ತ ಆ ರೀತಿ ಮಹಜರ್ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ಆರೋಪಿ ನನಗೆ ಹಲ್ಲೆ ಮಾಡಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು: ಶ್ರೀ ಎನ್ ಕೆ ಜಿ ಆರೋಪಿ ಪರ ವಕೀಲರಿಂದ:**

1. ಸಿವಿಲ್ ದಾವೆ ಚಾಲ್ತಿಯಲ್ಲಿದ್ದ ಬಗ್ಗೆ ಪೋಲಿಸರಿಗೆ ದಾಖಲಾತಿ ಕೊಟ್ಟಿರುವುದಿಲ್ಲ ಎಂದರೆ ಸರಿ. ಸದರಿ ದಾವೆ ತೀರ್ಪು ಆಗಿರುತ್ತದೆ. ಮು.ಮಾ-1 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮು.ಮಾ-1 ನ್ನು ನಾವೇ ಸೃಷ್ಟಿಮಾಡಿ ಪೋಲಿಸರಿಗೆ

ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನೀಲಗಿರಿ ತೋಪಿನಲ್ಲಿ ಆರೋಪಿಗಳು ಮರಗಳನ್ನು ಕಡಿಯುತ್ತಿದ್ದ ಬಗ್ಗೆ ಪೋಟೋವನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಒಬ್ಬನೇ ಹೋಗಿದ್ದು ನನ್ನ ಜೊತೆ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಸಿವಿಲ್ ದಾವೆಯಲ್ಲಿ ಆರೋಪಿಗಳ ಪರವಾಗಿ ತೀರ್ಪು ಆಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ನೀಲಗಿರಿ ತೋಪು ಆರೋಪಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾನು ನೀಲಗಿರಿ ತೋಪಿಗೆ ಹೋಗಿರುವುದಿಲ್ಲ ಆರೋಪಿಗಳು ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಿವಿಲ್ ದಾವೆಗೆ ಅನುಕೂಲವಾಗಲೀ ಎಂದು ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಿಪಿ-1 ರಲ್ಲಿ ಇರುವ ವಿಚಾರವನುನ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಶೆಟ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆ ರೀತಿ ನಾನು ಶೆಟ್ಟಿ ಆಸ್ಪತ್ರೆಗೆ ಹೋಗಿರುವುದಿಲ್ಲ ಯಾವುದೇ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಖಾಸಗಿ ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಯಲಹಂಕ ಸರ್ಕಾರಿ ಆಸ್ಪತ್ರೆಯಿಂದ ಸುಳ್ಳು ದಾಖಲೆಯನ್ನು ಸೃಷ್ಟಿಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ಮು.ಮಾ ನ್ನು ನನ್ನ ಸಮಕ್ಷಮ ಸ್ವಾದೀನ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ಪೋಲಿಸ್ ಠಾಣೆಯಲ್ಲಿ ತಯಾರು ಮಾಡಿದ್ದು ನಾನು ಅಲ್ಲೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಜೊತೆಯಲ್ಲಿ ಹೋಗಿದ್ದೆವು ಎಂದರೆ ಸರಿ. ಆ ರೀತಿ ಹೋಗಿದ್ದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ: ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಈ ಹಂತದಲ್ಲಿ ಪಾಟಿ ಸವಾಲು ಮಾಡಲು ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲು ಯಾವುದೇ ಸಕಾರಣಗಳು ಇಲ್ಲದೆ ಇರುವ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು

(ಈ ಹಂತದಲ್ಲಿ ಪಾಟಿ ಸವಾಲು ಮಾಡಲು ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲು ಯಾವುದೇ ಸಕಾರಣಗಳು ಇಲ್ಲದೆ ಇರುವ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆ ಮಾಡಲು ಮಾನ್ಯ ಸಸಅ ರವರ ವಿನಂತಿಯ ಮೇರೆಗೆ ಮುಂದೂಡಲಾಯಿತು.)

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಪಿಸಲು ವಿನಂತಿಸಿದ್ದು, ಮಾನ್ಯ ಸ.ಸ.ಅ ರವರ ಮನವಿಯನ್ನು ಪರಿಗಣಪಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಆರೋಪಿ ನನಗೆ ಪರಿಚಯ ಇರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಪಿಸಲು ವಿನಂತಿಸಿದ್ದು, ಮಾನ್ಯ ಸ.ಸ.ಅ ರವರ ಮನವಿಯನ್ನು ಪರಿಗಣಪಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)